ದಿನಾಂಕಃ **10.04.2026**

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಹೆಚ್.ವಿ.ಎಂ.ವಕೀಲರಿಂದಃ

ಪ್ರಸ್ತುತ 1 ನೇ ಪ್ರತಿವಾದಿ ನಮ್ಮ ಊರಿನಲ್ಲಿ ಇರುವುದಿಲ್ಲ. 1 ನೇ ಪ್ರತಿವಾದಿ ಊರಿಗೆ ಬಂದರೆ ನಮ್ಮ ಪರವಾಗಿ ಸಾಕ್ಷಿ ವಿಚಾರಣೆ ಮಾಡಿಸಲು ಯಾವುದೆ ತೊಂದರೆ ಇರುವುದಿಲ್ಲ. ನಿಡಿ-1 ರಲ್ಲಿ ನಮೂದು ಮಾಡಿರುವ ಎಂ.ಆರ್.ನಂ.21/1994-95 ರಂತೆ ನಮ್ಮ ಕುಟುಂಬದಲ್ಲಿ ನಾವು ದಿಃ26.08.1994 ರಲ್ಲಿ ಮಾಡಿಕೊಂಡ ವಿಭಾಗದ ಮೇರೆಗೆ ಆದೇಶ ಆಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ದಿಃ26.08.1994 ರಲ್ಲಿ ಮಾಡಿಕೊಂಡಿರುವ ವಿಭಾಗ ಪತ್ರದಲ್ಲಿ ನಾಗೇಶಪ್ಪನ ಪಾಲಿಗೆ ನೀಡಿರುವ ಜಮೀನಿನ ಪೂರ್ವಕ್ಕೆ ಬಂಡಿ ದಾರಿ ಎಂದು ನಮೂದು ಮಾಡಿರುತ್ತಾರೆ ಎಂದು ಸೂಚಿಸಿದ್ದಕ್ಕೆ ಸಾಕ್ಷಿ ಅದರ ಬಗ್ಗೆ ನನಗೆ ಗೊತ್ತಿರುವುದಿಲ್ಲ ನನ್ನನ್ನು ಕೇಳಿರುವುದಿಲ್ಲ ಅವರೆ ಬರೆದುಕೊಂಡಿರುತ್ತಾರೆ ಎಂದು ಉತ್ತರಿಸುತ್ತಾರೆ.

2. ದಿಃ26.08.0994 ರ ವಿಭಾಗ ಪತ್ರದಲ್ಲಿ ನಿಮ್ಮ ಪಾಲಿಗೆ ಬಂದಿರುವ ಜಮೀನಿನ ಚಕ್ಕು ಬಂದಿಯಲ್ಲಿ ಪಶ್ಚಿಮಕ್ಕೆ ಬಂಡಿದಾರಿ ಎಂದು ನಮೂದು ಮಾಡಿಸಿರುತ್ತಾರೆ ಎಂದು ಸೂಚಿಸಿದ್ದಕ್ಕೆ ಸಾಕ್ಷಿ ದಾರಿ ಬಿಟ್ಟಿರುತ್ತೇವೆ ಎಂದು ಉತ್ತರಿಸುತ್ತಾರೆ. ನಾಗೇಶಪ್ಪನ ಮಗ ಚಾಣುಕ್ಯ ದಾವಾ ಸರ್ವೆ.ನಂಬರ್ ಸ್ವತ್ತಿನಲ್ಲಿ ದಾರಿಗೆ ಸಂಬಂಧಿಸಿದಂತೆ ಓ.ಎಸ್.ನಂ.601/2025 ರಂತೆ ದಾವೆಯನ್ನು ಹೂಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ವಿಭಾಗದಲ್ಲಿ ನನ್ನ ಪಾಲಿಗೆ ನೀಡಿರುವ ಜಮೀನಿನಲ್ಲಿ ಸರ್ವೆ.ನಂಬರ್.211 ಮತ್ತು ಸರ್ವೆ.ನಂಬರ್.213 ಕ್ಕೆ ಹೋಗಲು ದಾರಿ ಇದ್ದರು ಸಹ ವಾದಿಗಳು ಸದರಿ ದಾರಿಯನ್ನು ಉಪಯೋಗಿಸಲು ನಾನು ತೊಂದರೆ

ಉಂಟುಮಾಡುತ್ತಿರುತ್ತೇನೆ ಎಂದು ಸೂಚಿಸುವುದು ಸರಿಯಲ್ಲ. ಸಾಕ್ಷಿ ಮುಂದುವರೆದು ಮಧ್ಯದಲ್ಲಿ ದಾರಿ ಇರುವುದಿಲ್ಲ ಎಂದು ಉತ್ತರಿಸುತ್ತಾರೆ. ದಿಃ26.08.1994 ರ ವಿಭಾಗ ಪತ್ರದಂತೆ ದಾರಿ ಅಸ್ತಿತ್ವದಲ್ಲಿ ಇದ್ದರು ಸಹ ಉದ್ದೇಶ ಪೂರ್ವಕಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ. ವಾದ ಪತ್ರದಲ್ಲಿ ನಮೂದು ಮಾಡಿರುವಂತೆ ದಾರಿ ಅಸ್ತಿತ್ವದಲ್ಲಿ ಇದ್ದರು ಸಹ ನನ್ನ ಮಕ್ಕಳ ಹೇಳಿಕೆ ಮೇರೆಗೆ ವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಸು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಸಹಿ/-

(ಶ್ರೀ ಅಮರನಾಥ ಬಿ.ಎನ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಮಧುಗಿರಿ